**SC No. 177/2024**
**PW.-03**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 177/2024

| | | |
|---|---|---|
| ಸಾಕ್ಷಿದಾರರ ಹೆಸರು | ಮಂಜೇಶ್ | ಪ್ರಮಾಣ ವಚನ ಮಾಡಿದ ದಿನಾಂಕ: 17.11.2025 |
| ತಂದೆಯ/ಗಂಡನ ಹೆಸರು | ಮುದ್ದಾಚಾರಿ | |
| ವಯಸ್ಸು | 37 ವರ್ಷ | |
| ವೃತ್ತಿ | ಕಾರ್ಪೆಂಟರ್ ಕೆಲಸ | ಪ್ರಾ.ಸಾಃ 03 |
| ವಾಸ ಸ್ಥಳ | ಎರಗನಹಳ್ಳಿ ಗ್ರಾಮ | ಚಾ.ಸಾಃ 03 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಫ್ರಾಸಾ–2 ನನಗೆ ಬಾಮೈದನಾಗಬೇಕು. ಫ್ರಾಸಾ–1 ಸಾನ್ವಿ ನನ್ನ ದೊಡ್ಡ ಮಗಳು. ನಾನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿರುತ್ತೇನೆ. ನನ್ನ ಹೆಂಡತಿಯ ಹೆಸರು ರಶ್ಮಿ. ನನ್ನ ಮತ್ತು ರಶ್ಮಿಯ ಮದುವೆಯಾಗಿ 7 ವರ್ಷವಾಗಿತ್ತು. ನನಗೆ ಇಬ್ಬರು ಹೆಣ್ಣು ಮಕ್ಕಳು ಸಾನ್ವಿ ಮತ್ತು ಜಾನ್ವಿ. ನಾನು ರಶ್ಮಿಯನ್ನು ಮದುವೆಯಾದ ಮೇಲೆ ಬೆಂಗಳೂರಿನಲ್ಲಿ ಕಾರ್ಪೆಂಟರ್ ಕೆಲಸ ಮಾಡಿಕೊಂಡಿದ್ದೆ. ಬೆಂಗಳೂರಿನಲ್ಲಿ ಸುಮಾರು 6 ವರ್ಷಗಳ ವರೆಗೆ ಕಾರ್ಪೆಂಟರ್ ಕೆಲಸ ಮಾಡಿಕೊಂಡಿದ್ದೆ. ಆನಂತರ ಮೈಸೂರಿಗೆ ಬಂದು ಮೈಸೂರಿನ ಎರಗನಹಳ್ಳಿಯಲ್ಲಿ ವಾಸವಾಗಿದ್ದೆವು. ಎರಗನಹಳ್ಳಿಯಲ್ಲಿ ಚಿಕ್ಕವರದಯ್ಯ ರವ ಮನೆಯಲ್ಲಿ ಬಾಡಿಗೆಗೆ ಇದ್ದೆವು. ನನ್ನ ದೊಡ್ಡ ಮಗಳು ಕಳೆದ 2–3 ವರ್ಷಗಳ ಹಿಂದಿನಿಂದ

ಮೌಲನಾ ಅಜಾದ್ ಶಾಲೆಯಲ್ಲಿ ಓದುತ್ತಿರುತ್ತಾಳೆ ನನ್ನ ಚಿಕ್ಕ ಮಗಳನ್ನು 2024 ನೇ ಇಸವಿ 5 ನೇ ತಿಂಗಳಿನಲ್ಲಿ ಪ್ರಿ ನರ್ಸರಿಗೆ ಸೇರಿಸಿರುತ್ತೇನೆ. ನಮ್ಮ ಮನೆಯಿಂದ 1 ಕಿಲೋಮೀಟರ್ ಅಂತರದಲ್ಲಿ ಆ ಪ್ರಿ ನರ್ಸರಿ ಇರುತ್ತದೆ. ನನ್ನ ಹೆಂಡತಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಗೃಹಿಣಿ ಇದ್ದರು. ನಾನು ಪ್ರದಿವಸ ಬೆಳಗ್ಗೆ 9.30 ಗೆ ಮನೆ ಬಿಟ್ಟರೆ ಸಂಜೆ 8.00 ಗಂಟೆ ಸುಮಾರಿಗೆ ಮನೆಗೆ ವಾಪಸ್ಸು ಬರುತ್ತಿದ್ದೆ. ಆರೋಪಿತನನ್ನು ನನ್ನ ಹೆಂಡತಿಯೇ ನನಗೆ ಪರಿಚಯ ಮಾಡಿಸಿದ್ದರು. ಆರೋಪಿತನು ನನ್ನ ಹೆಂಡತಿಗೆ ಸ್ನೇಹಿತ ಅಂತ ಹೇಳಿ ನನಗೆ ಪರಿಚಯ ಮಾಡಿಸಿದ್ದರು. ನನ್ನ ಹೆಂಡತಿ ಮರಣ ಹೊಂದುವ 1 ವರ್ಷದ ಹಿಂದೆ ಆರೋಪಿತನನ್ನು ನನಗೆ ಪರಿಚಯ ಮಾಡಿಸಿದ್ದಳು. ಆರೋಪಿತನು ನನ್ನೊಂದಿಗೆ ಚೆನ್ನಾಗಿ ಇದ್ದ. ಹೆಚ್ಚಾಗಿ ಸಂಪರ್ಕದಲ್ಲಿ ಇರಲಿಲ್ಲ. ನನ್ನ ಮತ್ತು ಆರೋಪಿತನ ನಡುವೆ ಬೇರೆ ಯಾವುದೇ ವ್ಯವಹಾರ ಇರಲಿಲ್ಲ. ನನ್ನ ದೊಡ್ಡ ಮಗಳು ಸಾನ್ವಿ ಪ್ರತಿದಿವಸ ಶಾಲೆಗೆ ಆಟೋದಲ್ಲಿ ಹೋಗಿ ಬರುತ್ತಿದ್ದಳು. 2 ನೇ ಮಗಳನ್ನು ನಾನು ಹೋಗಿ ಶಾಲೆಗೆ ಬಿಟ್ಟು ಬರುತ್ತಿದ್ದೆ ಶಾಲೆಯನ್ನು ಬಿಟ್ಟಾಗ ನನ್ನ ಹೆಂಡತಿ ಸ್ಕೂಟಿಯಲ್ಲಿ ಕರೆದುಕೊಂಡು ಬರುತ್ತಿದ್ದಳು. ನನ್ನ ಹೆಂಡತಿ ಮರಣ ಹೊಂದುವ 15 ದಿವಸ ಪೂರ್ವದಲ್ಲಿ ಸೆಂಕಡ್ ಹ್ಯಾಂಡಲ್ ಸ್ಕೂಟಿಯನ್ನು ತೆಗೆದುಕೊಂಡಿದ್ದೆ. ಆ ಸ್ಕೂಟಿಯನ್ನು ಖರೀದಿ ಮಾಡುವಾಗ 11,000/- ರೂಪಾಯಿ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೆ. ನಾನು 6,000/- ರೂ ಹಣವನ್ನು google pay ಮುಖಾಂತರ ಆರೋಪಿತನಿಗೆ ವಾಪಸ್ಸು ಕೊಟ್ಟಿರುತ್ತೇನೆ. ನಾನು ಮತ್ತು

ನನ್ನ ಹೆಂಡತಿ ಚೆನ್ನಾಗಿ ಇದ್ದೆವು.

ದಿನಾಂಕ 10.06.2024 ರಂದು ನಾನು ಬೆಳಗ್ಗೆ 9.30 ಗೆ ಮನೆಯಿಂದ ಹೊರಟು ವಸಂತನಗರಕ್ಕೆ ಕೆಲಸಕ್ಕೆ ಹೋಗಿದ್ದೆ. ಬೆಳಗ್ಗೆ 11.30 ಗಂಟೆ ಸುಮಾರಿಗೆ ನನ್ನ ಹೆಂಡತಿ ನನಗೆ ಫೋನ್ ಮಾಡಿ ಆರೋಪಿ ಮನೆಗೆ ಬಂದಿರುತ್ತಾನೆ ಎರಡು ಬೆಕ್ಕಿನ ಮರಿಗಳನ್ನು ತಂದುಕೊಟ್ಟಿರುತ್ತಾನೆ ಎಂದು ತಿಳಿಸಿದ್ದರು. ಆರೋಪಿತನು ಮಧ್ಯಾಹ್ನ 2.30 ಸುಮಾರಿಗೆ ನನಗೆ ಫೋನ್ ಮಾಡಿ ರಶ್ಮಿ ಫೋನ್ ತೆಗೆಯುತ್ತಿಲ್ಲ ಏನಾಗಿದೆ ನೋಡಿ ಎಂದು ಹೇಳಿದರು ನನಗೆ ಕೆಲಸ ಜಾಸ್ತಿ ಇದ್ದುದರಿಂದ ಕೂಡಲೇ ನಾನು ಮನೆಗೆ ಹೋಗಿರಲಿಲ್ಲ. ನಾನು ನನ್ನ ಹೆಂಡತಿ ಅತ್ತೆ ಮನೆಗೆ ಹೋಗಿರಬಹುದು ಅಲ್ಲಿ ಎಲ್ಲಿಯೋ ಇರಬಹುದು ಎಂದುಕೊಂಡಿದ್ದೆ. ಸಂಜೆ 4.00–4.30 ಗಂಟೆ ಸಮಯದಲ್ಲಿ ನಮ್ಮ ಮನೆಯ ಮುಂದಿನ ಮನೆಯ ವಾಸಿ ಪ್ರಸನ್ನ ರವರು ನನಗೆ ಫೋನ್ ಮಾಡಿ ನಿನ್ನ ಹೆಂಡತಿ ಮಾತನಾಡುತ್ತಿಲ್ಲ ಸುಮ್ಮನೆ ಕುಳಿತುಕೊಂಡಿರುತ್ತಾರೆ ಬನ್ನಿ ಅಂತ ತಿಳಿಸಿದ್ದರು. ನನ್ನ ದೊಡ್ಡ ಮಗಳು ಆ ದಿನ ಶಾಲಗೆ ಹೋಗಿದ್ದಳು 4.00 ಗಂಟೆಗೆ ಶಾಲೆ ಬಿಟ್ಟಿತ್ತು ಶಾಲೆ ಬಿಟ್ಟ ಮೇಲೆ ಮನೆಗೆ ಬಂದಿದ್ದು ಮನೆಯ ಒಳಗಡೆ ಹೋಗಿ ನನ್ನ ಹೆಂಡತಿಯನ್ನು ನೋಡಿ ನನ್ನ ಮಗಳೇ ಪಕ್ಕದ ಮನೆಯವರಿಗೆ ಮತ್ತು ಎದುರು ಮನೆಯವರಿಗೆ ಹೇಳಿದ್ದರಿಂದ ಅವರು ನನಗೆ ಫೋನ್ ಮಾಡಿದ್ದರು ಆ ರೀತಿ ಫೋನ್ ಮಾಡಿದ ಮೇಲೆ ನಾನು 4.30–5.00 ಗಂಟೆ ಸುಮಾರಿಗೆ ನಮ್ಮ ಮನೆಯ ಹತ್ತಿರ ಬಂದೆ. ನಾನು ಮನೆಯ ಒಳಗಡೆ ಹೋಗಿ ನೋಡಲಾಗಿ

ರೂಂನಲ್ಲಿ ಒಂದು ಚೇರ್ ಅನ್ನು ಹಾಕಲು ಜಾಗ ಇದ್ದು ಆ ಚೇರ್ ಮೇಲೆ ಎಡಗಡೆ ಒರಗಿಕೊಂಡು ಕುಳಿತುಕೊಂಡಿರುವ ಸ್ಥಿತಿಯಲ್ಲಿ ಇದ್ದರು. ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಮುಖ ಕಪ್ಪಾಗಿತ್ತು ನಾನು ನೀರನ್ನು ಹಾಕಿದೆ. ನಾನು ಬಂದಾಗ ಮನೆಯಲ್ಲಿ ಯಾರು ಇರಲಿಲ್ಲ. ನಾನು ನನ್ನ ಹೆಂಡತಿಯನ್ನು ನಮ್ಮ ಮನೆಯ ಪಕ್ಕದ ವಾಸಿ ಗಿರೀಶ್ ರವರ ಆಟೋದಲ್ಲಿ ಕಾವೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ವೇಳೆಯಲ್ಲಿ ನಮ್ಮ ಮನೆಯ ಅಕ್ಕಪಕ್ಕದವರು ಸಹಾಯ ಮಾಡಿ ಆಟೋಗೆ ಹಾಕಿಕೊಟ್ಟಿದ್ದರು. ಅಷ್ಟು ಹೊತ್ತಿಗೆ ನನ್ನ ಅತ್ತೆ ಮತ್ತು ಬಾಮೈದ ಬಂದಿದ್ದರು. ಕಾವೇರಿ ಆಸ್ಪತ್ರೆಯಲ್ಲಿ ನನ್ನ ಹೆಂಡತಿ ಈಗ ಮರಣ ಹೊಂದಿರುತ್ತಾರೆ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ತಿಳಿಸಿದ್ದರು. ನಾವು ಕೆ.ಆರ್. ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದೆವು. ದೂರನ್ನು ನನ್ನ ಬಾಮೈದ ಕೊಟ್ಟಿದ್ದ.

ನನಗೆ ಯಾರ ಮೇಲೆಯೂ ಡೌಟ್ ಬಂದಿರಲಿಲ್ಲ, ಆ ನಂತರ ನನ್ನ ಬಾಮೈದ ನನಗೆ ಯಾರ ಮೇಲಾದರೂ ಡೌಟ್ ಇದೆಯಾ ಎಂದು ಕೇಳಿದರು ಅದಕ್ಕೆ ನಾನು ನನ್ನ ಹೆಂಡತಿ ಆ ದಿವಸ ಆರೋಪಿತನು ಮನೆಗೆ ಬಂದಿದ್ದಾಗ ನನಗೆ ಫೋನ್ ಮಾಡಿ ತಿಳಿಸಿದ್ದ ವಿಚಾರವನ್ನು ನನ್ನ ಬಾಮೈದುನನಿಗೆ ತಿಳಿಸಿದ್ದೆ ಆಗ ನನ್ನ ಬಾಮೈದ ದೂರನ್ನು ಕೊಟ್ಟಿದ್ದರು. ನಾನು ಆರೋಪಿತನಿಗೆ ಫೋನ್ ಮಾಡಿ ಪೊಲೀಸ್ ಠಾಣೆಗೆ ಕರೆಸಿದ್ದೆ. ಆರೋಪಿತ ಪೊಲೀಸ್ ಠಾಣೆಗೆ ಬಂದಿದ್ದ.

ಶವ ಪರೀಕ್ಷೆ ಆದ ಮೇಲೆ ಮಾರನೇ ದಿವಸ ಶವವನ್ನು ಕೊಟ್ಟಿದ್ದರು ಆ ನಂತರ ನಾವು ಶವವನ್ನು ಅಂತ್ಯಕ್ರಿಯೆ ಮಾಡಿದ್ದೆವು. ಶವಪರೀಕ್ಷೆ ಗೆ ಹೋದಾಗ ನನ್ನ ಬಾಮೈದ ಕುತ್ತಿಗೆ ಹತ್ತಿರ ಒಂದು ಮಾರ್ಕ್ ಇದೆ ಎಂದು ಹೇಳಿದ್ದ ಅದೇ ಡೌಟ್ ಮೇಲೆ ದೂರನ್ನು ಕೊಟ್ಟಿದ್ದ. ಪೊಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದರು.

ದಿನಾಂಕ 12 ನೇ ತಾರೀಖು ಮಹಜರ್ ಗೆ ಮನೆಗೆ ಬಂದಿದ್ದರು. ಪೊಲೀಸರು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ಕರೆದುಕೊಂಡು ಬಂದಿದ್ದರು. ನಾನು ಮನೆಯ ಹೊರಗೆ ಇದ್ದೆ ಪೊಲೀಸರು ಆರೋಪಿತನನ್ನು ಮನೆಯ ಒಳಗೆ ಕರೆದುಕೊಂಡು ಹೋಗಿ ಏನೇನು ಮಾಡಿದೆ ಎಂದು ಕೇಳುತ್ತಿದ್ದರು ಪೊಲೀಸರು ಮಹಜರ್ ಮಾಡಿ ನನ್ನ ಹತ್ತಿರ ಸಹಿ ತೆಗೆದುಕೊಂಡಿದ್ದರು. ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಪಂಚನಾಮೆ ಮತ್ತು ಕಚ್ಚಾ ನಕ್ಷೆಯ ಮೇಲೆ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸ್ಥಳ ಮಹಜರ್ ಅನ್ನು **ನಿಪಿ.8** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ.8(ಎ)** ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು **ನಿಪಿ-9**, ಸಾಕ್ಷಿದಾರರ ಸಹಿಯನ್ನು **ನಿಪಿ.9(ಎ)** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ವಿಚಾರಣೆ ಮಾಡಿದ್ದರು. ಮಹಜರ್ ಮಾಡಿದ ನಂತರ ಮತ್ತೆ ಇನ್ನೇನು ಮಾಡಿರಲಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**

**ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಕೆಎ–09–ಹೆಚ್ಆರ್5776 ನಂಬರ್ ನ ಸ್ಕೂಟಿಯನ್ನು ನನ್ನ ಹೆಂಡತಿ ಓಡಾಡಲು ಬಳಸುತ್ತಿದ್ದಳು ಎಂದರೆ ಸರಿ. ನನ್ನ ಬಾಮ್ಮೈದ ನಾನು ಇಲ್ಲದ ಸಮಯದಲ್ಲಿ ರಾಮ್ ಕುಮಾರ್ ಎಂಬುವರು ಮನೆಗೆ ಬಂದು ಹೋಗುತ್ತಿದ್ದು ರಶ್ಮಿ ಅಹ ಅವರೊಂದಿಗೆ ಸಲುಗೆಯಿಂದ ಓಡಾಡುತ್ತಿದ್ದು ನಾನು ಬುದ್ದಿವಾದ ಹೇಳಿದ್ದು ಅವಳು ನನ್ನ ಮಾತು ಕೇಳುತ್ತಿಲ್ಲ ಎಂದು ಹೇಳಿರುತ್ತಾನೆ ಎಂದರೆ ಸರಿ. ನಾನು ರಶ್ಮಿಗೆ ರಾಮ್ ಕುಮಾರ್ ಈ ರೀತಿ ಮನೆಗೆ ಬಂದು ಹೋಗುವುದು ಸರಿ ಕಾಣುವುದಿಲ್ಲ ನೀನು ಅವನೊಂದಿಗೆ ಓಡಾಡಬೇಡ ಎಂದು ಹೇಳಿದ್ದಕ್ಕೆ ರಶ್ಮಿ ನೀನು ನನ್ನ ಮೇಲೆ ಈ ರೀತಿ ಅನುಮಾನ ಪಟ್ಟರೆ ನಿನ್ನ ಹೆಸರು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳಿ ಗಲಾಟೆ ಮಾಡಿದ್ದಳು ನಾನು ಅಂದಿನಿಂದ ಸುಮ್ಮನಾದೆ ಎಂದರೆ ಸರಿ. ಮಧ್ಯಾಹ್ನ ಸುಮಾರು 3.00 ಗಂಟೆ ಸಮಯದಲ್ಲಿ ರಾಮ್ ಕುಮಾರ್ ನನಗೆ ಫೋನ್ ಮಾಡಿ ರಶ್ಮಿ ಗೆ ಫೋನ್ ಮಾಡಿದೆ ಅವರು ಫೋನ್ ತೆಗೆಯುತ್ತಿಲ್ಲ ನೋಡಿ ಎಂದು ಹೇಳಿದ ನಾನು ರಶ್ಮಿಗೆ ಫೋನ್ ಮಾಡಿದಾಗ ಫೋನ್ ರಿಂಗ್ ಆಗುತ್ತಿತ್ತು ಅವರು ಫೋನ್ ರಿಸೀವ್ ಮಾಡಿರಲಿಲ್ಲ ನಾನು ಮತ್ತೆ ರಾಮ್ ಕುಮಾರ್ ಗೆ ಫೋನ್ ಮಾಡಿ ಅವಳು ಫೋನ್ ತೆಗೆಯುತ್ತಿಲ್ಲ ಎಂದು ಹೇಳಿದೆ ಎಂದರೆ ಫೋನ್

ಮಾಡಿದ್ದೆ ಸ್ವಿಚ್ ಆಫ್ ಆಗಿತ್ತು ನಾನು ನಂತರ ರಾಮ್ ಕುಮಾರ್ ಗೆ ಫೋನ್ ಮಾಡಿ ಫೋನ್ ಸ್ವಿಚ್ ಆಫ್ ಆಗಿದೆ ಸಂಜೆ ಹೋಗುತ್ತೇನೆ ನೋಡುತ್ತೇನೆ ಎಂದು ತಿಳಿಸಿದ್ದೆ. ನನ್ನ ಬಾಮೈದ ಮೊದಲು ದೂರು ಕೊಟ್ಟಾಗ ರಶ್ಮಿಯ ಸಾವಿನ ಬಗ್ಗೆ ಸಂಶಯ ಇರುತ್ತದೆ ಎಂದು ಹೇಳಿ ದೂರು ಕೊಟ್ಟಿದ್ದರು ಎಂದರೆ ಸರಿ. ನಾನು ಬಾಮೈದ ಕೃಷ್ಣ ನು ರಶ್ಮಿಯ ಸಾವಿನ ಬಗ್ಗೆ ಅನುಮಾನ ಇರುವುದಾಗಿ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದನು. ಶವಪರೀಕ್ಷೆಯ ದಿನ ರಶ್ಮಿಯ ಶವ ನೋಡಿದಾಗ ಬಲ ಕುತ್ತಿಗೆಯ ಬಳಿ ಯಾವುದೋ ವಸ್ತುವಿನಿಂದ ಬಿಗಿದಿರುವಂತೆ ಕಲೆ ಇದ್ದು ಯಾವುದರಿಂದಲೋ ಕುತ್ತಿಗೆ ಬಿಗಿದು ಸಾಯಿಸಿರುವಂತೆ ಕಂಡು ಬಂದಿತ್ತು ಎಂದರೆ ಸರಿ. ದಿನಾಂಕ 10.06.2024 ರಂದು ರಾಮ್ ಕುಮಾರ್ ಮನೆ ಗೆ ಬಂದು ಹೋಗಿರುವ ವಿಚಾರ ಅಕ್ಕಪಕ್ಕದ ಮನೆಯವರಿಂದ ತಿಳಿಯಿತು. ರಾಮ್ ಕುಮಾರ್ ಮನೆಗೆ ಬಂದಿರುವ ಬಗ್ಗೆ ರಶ್ಮಿ ನನಗೆ ತಿಳಿಸಿದ್ದು ರಾಮ್ ಕುಮಾರನೇ ಯಾವುದೇ ಕಾರಣಕ್ಕೆ ಯಾವುದೋ ವಸ್ತುವಿನಿಂದ ರಶ್ಮಿಯ ಕುತ್ತಿಗೆ ಬಿಗಿದು ಕೊಲೆ ಮಾಡಿರುತ್ತಾನೆ ಎಂದು ನನ್ನ ಬಾಮೈದ ಕೃಷ್ಣ ದಿನಾಂಕ 11.06.2024 ರಂದು ಮತ್ತೆ ದೂರು ನೀಡಿರುತ್ತಾನೆ ಎಂದರೆ ಸರಿ. ನಾನು ಇದೇ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿ. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿ. ಸಾಕ್ಷಿದಾರರು 4 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ **ನಿಪಿ-10 ರಿಂದ 13** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :</u>**

ನನ್ನ ಮದುವೆ ಪೂರ್ವದಲ್ಲಿಯೇ ನಾನು ಬೆಂಗಳೂರಿನಲ್ಲಿ ಇದ್ದೆ. ಮದುವೆ ಆದ ಮೇಲೆ ಸಹ ಬೆಂಗಳೂರಿನಲ್ಲಿ ಇದ್ದೆ. ಮದುವೆಯಾದ ಸುಮಾರು 3–4 ವರ್ಷಗಳ ಕಾಲ ಬೆಂಗಳೂರಿನಲ್ಲಿ ಇದ್ದು ಆ ನಂತರ ಮೈಸೂರಿಗೆ 2020 ನೇ ಇಸವಿಯಲ್ಲಿ ಬಂದಿದ್ದೆ. ಆರೋಪಿತನು ನಾನು ಬೆಂಗಳೂರಿನಲ್ಲಿ ಇದ್ದಾಗ ಪರಿಚಯ ಇರಲಿಲ್ಲ. ನನ್ನ ಹೆಂಡತಿ ಮರಣಹೊಂದುವ ಪೂರ್ವದಲ್ಲಿ 1 ವರ್ಷದಿಂದ ಆರೋಪಿತನು ಪರಿಚಯ ಇದ್ದ. ಆರೋಪಿತನು ನನ್ನ ಹೆಂಡತಿಯ ಯಾವ ಸಂಬಂಧಿಕನಿಗೆ ತುಂಬಾ ಸ್ನೇಹಿತರು ಮತ್ತು ಪರಿಚಯಸ್ಥರು ಎಂದು ಹೇಳಿದ್ದರೋ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಆರೋಪಿತನು ನನ್ನ ಬಾಮೈದ ಮತ್ತು ಅತ್ತೆಗೆ ಪರಿಚಯ ಇರುವ ವ್ಯಕ್ತಿ ಇರಲಿಲ್ಲ. ನಾನು ನನ್ನ ಹೇಳಿಕೆಯಲ್ಲಿ ರಶ್ಮಿಗೆ ರಾಮ್ ಕುಮಾರ್ ಈ ರೀತಿ ಮನೆಗೆ ಬಂದು ಹೋಗುವುದು ಸರಿ ಕಾಣುವುದಿಲ್ಲ ನೀನು ಅವನೊಂದಿಗೆ ಓಡಾಡಬೇಡ ಎಂದು ಹೇಳಿದ್ದಕ್ಕೆ ರಶ್ಮಿ ನೀವು ನನ್ನ ಮೇಲೆ ಈ ರೀತಿ ಅನುಮಾನ ಪಟ್ಟರೆ ನಿಮ್ಮ ಹೆಸರನ್ನು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳಿ ಗಲಾಟೆ ಮಾಡಿದ್ದಳು ಎಂದರೆ ಸರಿ. ನಾನು ರಶ್ಮಿ ಈ ರೀತಿ ಗಲಾಟೆ ಮಾಡಿದ ಮೇಲೆ ರಶ್ಮಿಯನ್ನು ಕರೆದುಕೊಂಡು ನನ್ನ ಅತ್ತೆಯ ಮನೆಗೆ ಹೋಗಿ ಬಾಮೈದನನಿಗೆ ಮತ್ತು ಅತ್ತೆಗೆ ಈ ವಿಚಾರವನ್ನು ತಿಳಿಸಿರಲಿಲ್ಲ. ಆದರೆ ನಾನು ಪ್ರತ್ಯೇಕವಾಗಿ ನನ್ನಬಾಮೈದುನನಿಗೆ ತಿಳಿಸಿದ್ದೆ. ನಾನು ವಾಸ ಮಾಡುತ್ತಿದ್ದ ಮನೆಯಿಂದ ನನ್ನ ಅತ್ತೆಯ ಮನೆಗೆ ಸುಮಾರು ಅರ್ಧ ಕಿಲೋಮೀಟರ್ ಅಂತರ ಇತ್ತು. ಆರೋಪಿ ನನಗೆ ಫೋನ್

ಮಾಡಿ ರಶ್ಮಿ ಫೋನ್ ಮಾಡಿದರೂ ಫೋನ್ ತೆಗೆಯುತ್ತಿಲ್ಲ ಎಂದು ಹೇಳಿದಾಗ ನಾನು ರಶ್ಮಿಗೆ ಫೋನ್ ಮಾಡಿದಾಗ ಫೋನ್ ಸ್ವಿಚ್ ಆಫ್ ಆಗಿರುತ್ತದೆ ಎಂದು ಗೊತ್ತಾದ ಮೇಲೆ ನಾನು ನನ್ನ ಅತ್ತೆಗಾಗಲೀ ಅಥವಾ ಬಾಮೈದುನನಿಗೆ ಫೋನ್ ಮಾಡಿರಲಿಲ್ಲ. ನಾನು ಪೊಲೀಸರಿಗೆ ದಿನಾಂಕ 11 ನೇ ತಾರೀಖಿನಿಂದು ಹೇಳಿಕೆ ಕೊಟ್ಟಿದ್ದೆ. ನನ್ನನ್ನು ಪೊಲೀಸರು ಒಂದು ಸಾರಿ ಅಥವಾ ಎರಡು ಸಾರಿ ವಿಚಾರಣೆ ಮಾಡಿದ್ದರು. ನಾನು ಪೊಲೀಸರ ಮುಂದೆ ಕೊಟ್ಟಂತಹ ಹೇಳಿಕೆಯಲ್ಲಿ ನಾನು ರಶ್ಮಿಗೆ ಫೋನ್ ಮಾಡಿದಾಗ ಸ್ವಿಚ್ ಆಫ್ ಆಗಿತ್ತು ಎಂದು ಹೇಳಿರುವುದಿಲ್ಲ ಫೋನ್ ರಿಂಗ್ ಆಗುತ್ತಿತ್ತು ತೆಗೆಯಲಿಲ್ಲ ಅಂತ ಹೇಳಿರುತ್ತೇನೆ ಎಂದರೆ ಸರಿ. ನಮ್ಮ ಮನೆಯ ಅಕ್ಕಪಕ್ಕದ ವಾಸಿ ಪ್ರಸನ್ನ ಮತ್ತು ಗಿರೀಶ್ ಗೊತ್ತಿರುತ್ತಾರೆ ಮತ್ತು ಅವರ ಫೋನ್ ನಂಬರ್ ಗಳು ನನಗೆ ಗೊತ್ತಿರುತ್ತವೆ ಎಂದರೆ ಸರಿ. ನನ್ನ ಮನೆಗೆ ಹೊಂದಿಕೊಂಡು ಗಿರೀಶ್ ರವರ ಮನೆ ಇರುತ್ತದೆ. ನಮ್ಮ ಮನೆಯಲ್ಲಿ ಜೋರಾಗಿ ಗಲಾಟೆಯಾದರೆ ಕೇಳಿಸುವುದಿಲ್ಲ ಜೋರಾಗಿ ಕಿರುಚಿದರೆ ಕೇಳಿಸುತ್ತದೆ. ನಮ್ಮ ಮನೆಯ ಎದುರಿಗೆ 15-20 ಅಡಿ ಅಂತರದಲ್ಲಿ ಪ್ರಸನ್ನ ರವರ ಮನೆ ಇರುತ್ತದೆ. ನಾನು ಮನೆಯ ಹತ್ತಿರ ಹೋದಾಗ ಅಕ್ಕಪಕ್ಕದ ಜನರು ಮನೆಯಿಂದ ಹೊರಗಡೆ ಇದ್ದರು ಅವರಲ್ಲಿ ಪ್ರಸನ್ನ, ಪ್ರಸನ್ನನ ಹೆಂಡತಿ, ಗಿರೀಶ, ಗಿರೀಶನ ಹೆಂಡತಿ ಮತ್ತು ಅಕ್ಕಪಕ್ಕದವರು ಇದ್ದರು. ನಾನು ಮನೆಯ ಒಳಗಡೆ ಹೋಗಿ ನೋಡಿದಾಗ ನನ್ನ ಹೆಂಡತಿ ಉಸಿರಾಡುತ್ತಿರಲಿಲ್ಲ. ನಾನು ಪೊಲೀಸರ ಮುಂದೆ ಕೊಟ್ಟಂತಹ ಹೇಳಿಕೆಯಲ್ಲಿ ನಾನು ಮನೆಯ ಒಳಗೆ ಹೋಗಿ

ನೋಡಿದಾಗ ನನ್ನ ಹೆಂಡತಿ ಉಸಿರಾಡುತ್ತಿರಲಿಲ್ಲ ಎಂದು ಹೇಳಿರಲಿಲ್ಲ. ನಮ್ಮ ಮನೆಯಿಂದ ಕಾವೇರಿ ಆಸ್ಪತ್ರೆ ಒಂದರಿಂದ ಒಂದೂವರೆ ಕಿಲೊಮಿಟರ್ ಅಂತರ. ನಾನು ಮನೆಗೆ ಹೋದಾಗ ಸಂಜೆ 4.30 ರಿಂದ 5.00 ಗಂಟೆ ಆಗಿತ್ತು. ಕಾವೇರಿ ಆಸ್ಪತ್ರೆಗೆ ಹೋದಾಗ ಸಂಜೆ 5.30 ಗಂಟೆ ಆಗಿತ್ತು. ದಿನಾಂಕ 10.06.2024 ರಂದು ನಾನು ಯಾವುದೇ ವ್ಯಕ್ತಿಯ ಮೇಲೆ ಅನುಮಾನ ಬಂದಿರುತ್ತದೆ ಎಂದು ಪೊಲೀಸರಿಗೆ ಹೇಳಿರಲಿಲ್ಲ. ನನ್ನ ಬಾಮೈದ ಕೊಟ್ಟಂತಹ ದೂರಿನಲ್ಲಿಯೂ ಸಹ ಯಾರ ಮೇಲಾದರೂ ಅನುಮಾನ ಇದೆ ಎಂದು ಹೇಳಿರಲಿಲ್ಲ.

ದಿನಾಂಕ 10.06.2024 ರಂದು ಸಂಜೆ 7.30 ಗಂಟೆ ಸುಮಾರಿಗೆ ಆರೋಪಿತನನ್ನು ನೋಡಿದ್ದೆ. ಆರೋಪಿ ಪೊಲೀಸ್ ಠಾಣೆಗೆ ಬಂದಿದ್ದ. ನಾನು ಫೋನ್ ಮಾಡಿದ್ದರಿಂದ ಆರೋಪಿತನೇ ಪೊಲೀಸ್ ಠಾಣೆಗೆ ಬಂದಿದ್ದ. ದಿನಾಂಕ 10.06.2024 ರಂದು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನ್ನ ಮನೆಗೆ ಬಂದಿದ್ದ ಎಂದು ಹೇಳುವ ಬಗ್ಗೆ ನಾನು ಬೇರೆ ಯಾರನ್ನು ವಿಚಾರಣೆ ಮಾಡಿರಲಿಲ್ಲ. ನಾನು ಆರೋಪಿತನಿಂದ 11,000/- ರೂಪಾಯಿ ಸ್ಕೂಟಿ ತೆಗೆದುಕೊಳ್ಳಲು ಸಾಲ ತೆಗೆದುಕೊಂಡಿದ್ದೆ ಅದರ ಪೈಕಿ 6,000/- ರೂಪಾಯಿ ವಾಪಸ್ಸು ಕೊಟ್ಟಿದ್ದೆ ಎನ್ನುವ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿರಲಿಲ್ಲ. ಆರೋಪಿತನು ನನ್ನ ಪತ್ನಿಯ ಸಾವಿನಲ್ಲಿ ಭಾಗಿಯಾಗದೇ ಇದ್ದರೂ ಸಹ ವಿನಾಕಾರಣ ಆತನಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಅವನ ವಿರುದ್ಧ

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 10.06.2024 ರಂದು ಆರೋಪಿತನು ಪೊಲೀಸ್ ಠಾಣೆಗೆ ಬಂದ ಮೇಲೆ ಅಲ್ಲಿಯೇ ಇದ್ದ. ಪೊಲೀಸರು ಆರೋಪಿತನನ್ನು ವಿಚಾರಣೆ ಮಾಡಿದಾಗ ನಾನು ಇರಲಿಲ್ಲ. ಪೊಲೀಸರು ಆರೋಪಿತನನ್ನು ನಮ್ಮ ಮನೆಗೆ ಕರೆದುಕೊಂಡು ಬಂದಾಗ ನಾನು ಹಾಲ್ ನಲ್ಲಿ ಇದ್ದೆ ಪೊಲೀಸರು ಮತ್ತು ಆರೋಪಿ ರೂಂನಲ್ಲಿ ಇದ್ದರು. ರಶ್ಮಿಯ ಕುತ್ತಿಗೆ ಹತ್ತಿರ ಮಾರ್ಕ್ ಆಗಿದ್ದನ್ನು ನಾನು ನೋಡಿರಲಿಲ್ಲ. ನಾನು ಮನೆಗೆ ಬಂದು ಹೆಂಡತಿಯನ್ನು ಉಪಚರಿಸುವ ವೇಳೆಯಲ್ಲಿ ಕುತ್ತಿಗೆ ಹತ್ತಿರ ಇದ್ದ ಮಾರ್ಕ್ ಅನ್ನು ಗಮನಿಸಿರುವುದಿಲ್ಲ ನಾನು ಗಾಬರಿಯಲ್ಲಿ ಇದ್ದೆ. ಆರೋಪಿತನು 2 ಬೆಕ್ಕಿನ ಮರಿಗಳನ್ನು ತಂದು ಕೊಟ್ಟಿರುತ್ತಾನೆ ಎಂದು ನನ್ನ ಹೆಂಡತಿ ನನಗೆ ಫೋನ್ ಮಾಡಿದ್ದಳು ಎಂದು ನನ್ನ ಹೆಂಡತಿ ನನಗೆ ಫೋನ್ ಮಾಡಿದ್ದಳು ಎಂದು ಪೊಲೀಸರ ಮುಂದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿ ಹೇಳಿಕೆ ನೀಡದೇ ಇದ್ದರೂ ಸಹ ಹೇಳಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಸಾವಿಗೆ ಆರೋಪಿತ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**